ಉದಯವಾಣಿ
ಕನ್ನಡ ದಿನಪತ್ರಿಕೆ

**Monday, January 31st, 2011**

# ಆತಿಥೇಯ ಜೈನ್ ವಿವಿಗೆ ಕ್ರಿಕೆಟ್ ಪ್ರಶಸ್ತಿ

**ಬೆಂಗಳೂರು:** ಸಮರ್ಥ್ ಆರ್ (101 ಮತ್ತು 17ಕ್ಕೆ3) ಪ್ರಚಂಡ ಪ್ರದರ್ಶನದ ನೆರವು ಪಡೆದ ಜೈನ್ ವಿಶ್ವವಿದ್ಯಾಲಯ ತಂಡ ಆಸ್ಪೈರ್ ವೀ2011 ಅಖಿಲ ಭಾರತ ಕ್ರೀಡಾಕೂಟದಲ್ಲಿ ಕ್ರಿಕೆಟ್ ಪ್ರಶಸ್ತಿ ಗೆದ್ದುಕೊಂಡಿದೆ.

ಫೈನಲ್‌ನಲ್ಲಿ ಜೈನ್ ವಿವಿ ಹಿಂದೂಸ್ಥಾನ್ ವಿವಿ ತಂಡವನ್ನು ಸೋಲಿಸಿತು.

**ಜೈನ್ ವಿವಿ: 8ಕ್ಕೆ 264** (ಸಮರ್ಥ್ 101, ಮಯಾಂಕ್ 54, ಅಬ್ಬಾಸ್ 38); **ಹಿಂದೂಸ್ಥಾನ್ ವಿವಿ ಚೆನ್ನೈ: 157** (ಸಿನನ್ 31ಕ್ಕೆ5, ಸಮರ್ಥ್ 17ಕ್ಕೆ3).

**ಹಾಕಿ:** ಅಲ್ ಅಮೀನ್ ತಂಡ 5–1ರಿಂದ ಸುರಾನ ಕಾಲೇಜು ತಂಡವನ್ನು ಸೋಲಿಸಿ ಹಾಕಿ ಪ್ರಶಸ್ತಿ ಗೆದ್ದುಕೊಂಡಿತು.

**ಗಾಲ್ಫ್:** ಜೈನ್ ವಿವಿಯ ಖಾಲಿನ್ ಜೋಷಿ ಪ್ರಶಸ್ತಿ ಗೆದ್ದರೆ, ಎನ್‌ಎಫ್‌ಎಲ್‌ನ ರಾಹುಲ್ ರವಿ 2ನೇ ಸ್ಥಾನ ಪಡೆದರು.

**ಬ್ಯಾಸ್ಕೆಟ್‌ಬಾಲ್:** ಎಸ್‌ಆರ್‌ಎಂ ವಿವಿ 89–81ರಿಂದ ಕ್ರೈಸ್ಟ್ ವಿವಿಯನ್ನು ಹಾಗೂ ಸತ್ಯಭಾಮಾ ಕಾಲೇಜು ಚೆನ್ನೈ 63–33ರಿಂದ ಜೈನ್ ವಿವಿಯನ್ನು ಸೋಲಿಸಿದವು.

ಮಹಿಳಾ ವಿಭಾಗದಲ್ಲಿ ಎಸ್‌ಆರ್‌ಎಂ ವಿವಿ ಚೆನ್ನೈ 50–46ರಿಂದ ಎಂಒಪಿ ವೈಷ್ಣವ್ ಚೆನ್ನೈ ವಿರುದ್ಧ ಜಯಿಸಿತು.

**ವಾಲಿಬಾಲ್:** ಎಸ್‌ಆರ್‌ಎಂ ವಿವಿ ಪುರುಷರ ತಂಡ 3–0 ಸೆಟ್‌ಗಳಿಂದ ವಿಐಎಲ್‌ಎಸ್ ವಿವಿಯನ್ನು ಸೋಲಿಸಿತು.

**ಬೌಲಿಂಗ್:** ಪುರುಷರ ವಿಭಾಗದಲ್ಲಿ ಎಎನ್‌ಟಿಎಸ್ ಅನಿಮೇಷನ್ ಸ್ಕೂಲ್‌ನ ಸುಪ್ರೀತ್ ಡಿಎನ್ ಹಾಗೂ ಮಹಿಳಾ ವಿಭಾಗದಲ್ಲಿ ಜೆಐಆರ್‌ಎಸ್‌ನ ಕರಿಷ್ಮಾ ಗುಲೇಚ ಪ್ರಶಸ್ತಿ ಗೆದ್ದರು.



**ಬೆಂಗಳೂರಿನಲ್ಲಿ ಭಾನುವಾರ ಆಸ್ಪೈರ್- ವೀ 2011 ಅಖಿಲ ಭಾರತ ಕ್ರೀಡಾಕೂಟದಲ್ಲಿ ಕ್ರಿಕೆಟ್ ಪ್ರಶಸ್ತಿ ಗೆದ್ದ ಜೈನ್ ವಿಶ್ವವಿದ್ಯಾಲಯ ತಂಡ. (ಮಂಡಿಯೂರಿದವರು) ಸಿನನ್, ಜಹೀರ್, ಸಿದ್ದಾರ್ಥ್, ಚಿರಂಜೀವಿ, ಸಮರ್ಥ್. (ನಿಂತವರು) ಅಬ್ರಾರ್ ಖಾಜಿ, ಸಂಜಯ್‌ಕುಮಾರ್, ಲಿಯಾನ್ ಖಾನ್, ನಿಕಿತ್, ಜೆ ಕಿಶನ್, ಕೌನೈನ್ ಅಬ್ಬಾಸ್, ಮಯಾಂಕ್ ಅಗರ್‌ವಾಲ್, ವಂಶೀಧರ್, ಶಶೀಂದ್ರ.**